Date : 29-9-2015

# ISMA ದಿಂದ 2015–16 ಸೀಜನ್‌ನ ಸಕ್ಕರೆ ಉತ್ಪಾದನೆ ಅಂದಾಜು 28 ಎಂ ಟನ್‌ಗಳಿಂದ 27 ಮಿಲಿಯನ್ ಟನ್‌ಗಳಿಗೆ ಇಳಿಕೆ

ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಮುಂಗಾರು ಮಳೆ ಕಡಿಮೆಯಾಗಿರುವುದನ್ನು ಗಣನೆಗೆ ತೆಗೆದುಕೊಂಡು ಇಸ್ಮಾ 2015–16 ಸೀಜನ್‌ನ ದೇಶೀ ಸಕ್ಕರೆ ಉತ್ಪಾದನೆ ಅಂದಾಜು 28 ಮಿಲಿಯನ್ ಟನ್‌ಗಳಿಂದ 27 ಮಿಲಿಯನ್ ಟನ್‌ಗಳಿಗೆ ಇಳಿಕೆಮಾಡಿದೆ. 2014–15ನೇ ಉತ್ಪಾದನಾ ಸೀಜನ್‌ನ ಸಕ್ಕರೆ ಉತ್ಪಾದನೆ 28.31 ಮಿಲಿಯನ್ ಟನ್‌ಗಳಾಗಿದ್ದು, ದೇಶೀ ಬಳಕೆ 25.1 ಮಿಲಿಯನ್ ಟನ್ ಮತ್ತು ರಫ್ತು 1.1 ಮಿಲಿಯನ್ ಟನ್‌ಗಳಾಗಿದ್ದು ಈ ವರ್ಷಕ್ಕೆ 9.6 ಮಿಲಿಯನ್ ಟನ್‌ಗಳ ದಾಸ್ತಾನು ಉಳಿಯಬಹುದೆನ್ನಲಾಗಿದೆ.

2015 ಸಪ್ಟೆಂಬರ್‌ನ ಉಪಗ್ರಹ ಮಾಹಿತಿಯನ್ನಾಧರಿಸಿ ಇಸ್ಮಾ ಒಟ್ಟು ಕಬ್ಬು ಬೆಳೆಯುವ ಪ್ರದೇಶ 52.84 ಲಕ್ಷ ಹೆಕ್ಟೇರ್‌ಗಳೆಂದು ಅಂದಾಜಿಸಿದೆ. ಇದು 2014–15ನೇ ಸಾಲಿನ ಪ್ರದೇಶಕ್ಕಿಂತ 0.4% ಕಡಿಮೆಯಾಗಿದೆ. ರಾಜ್ಯವಾರು 2015–16ರ ಸಕ್ಕರೆ ಉತ್ಪಾದನೆ ಮಹಾರಾಷ್ಟ್ರ 9.7 ಮಿಲಿಯನ್ ಟನ್‌ಗಳಿಂದ 9 ಮಿಲಿಯನ್ ಟನ್‌ಗಳಿಗೆ ಇಳಿಕೆ, 2014–15ನೇ ಸೀಜನ್‌ನಲ್ಲಿ ಮಹಾರಾಷ್ಟ್ರದ ಉತ್ಪಾದನೆ 10.5 ಮಿಲಿಯನ್ ಟನ್‌ಗಳು, ಉತ್ತರಪ್ರದೇಶದಲ್ಲಿ ಪುನರಂದಾಜಿಸಿದಂತೆ 7.5 ಎಂ.ಟನ್‌ಗಳಿಂದ ಇಳಿಕೆಯಾಗಿ 7.35 ಎಂ.ಟನ್‌ಗಳು (ಹಿಂದಿನ ಸಾಲಿನ ಉತ್ಪಾದನೆ 7.10 ಎಂ.ಟನ್‌ಗಳು) ಕರ್ನಾಟಕದಲ್ಲಿ ಎಕರೇಜ್ ಹೆಚ್ಚಳವಾಗಿದ್ದರೂ ಮಳೆಯ ಅಭಾವದಿಂದ ಉತ್ಪಾದನೆ 2015–16ರಲ್ಲಿ ಕಡಿಮೆಯಾಗಿ 4.6 ಎಂ.ಟನ್‌ಗಳಾಗಬಹುದು. ಇದು ಹಿಂದಿನ ಸಾಲಿನ ಉತ್ಪಾದನೆಗಿಂತ 4 ಲಕ್ಷಟನ್ ಕಡಿಮೆಯಾಗುವ ನಿರೀಕ್ಷೆಯಿದೆ.

ಗುಜರಾತ್‌ನ ಉತ್ಪಾದನೆ 2015–16 ರಲ್ಲಿ 1.15 ಎಂ.ಟನ್‌ಗಳಾಗುವ ನಿರೀಕ್ಷೆಯಿದೆ, ಆಂಧ್ರಪ್ರದೇಶ, ತೆಲಂಗಾಣಗಳಿಂದ 8,50,000 ಟನ್ ಹಿಂದಿನ ಸಾಲಿನ ಉತ್ಪಾದನೆಗೆ ಸಮನಾಗಿ ಹಾಗೂ, ಪಂಜಾಬ್ ಮತ್ತು ಹರ್ಯಾಣಗಳ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಅಲ್ಪಪ್ರಮಾಣದ ಇಳಿಕೆಯಾಗಿ, ಉತ್ತರಖಂಡ ಮತ್ತು ಬಿಹಾರಗಳ ಉತ್ಪಾದನೆ ಹಿಂದಿನ ಅವಧಿಯಷ್ಟೆ ಇರಬಹುದೆಂದು ಇಸ್ಮಾ ಅಂದಾಜಿಸಿದೆ.

quickmarketreports.com